ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ 7ನೇ ಸೆಪ್ಟಂಬರ್ 1994

7TH September 1995

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 9.30 ಗಂಟೆಗೆ
ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ವಿ. ಎಸ್ ಕೌಜಲಗಿ) ಅವರು
ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅನುಮತಿ ಕೋರಿ ಪ್ರಸ್ತಾಪಿಸಲಾದ ವಿಷಯ :

ವಿಷಯ : (ಅ) ವಸತಿ ಸಚಿವರ ಬಗ್ಗೆ ಪ್ರಸ್ತಾಪಿಸಲಾದ ವಿಷಯಕ್ಕೆ ಸಂಬಂಧ ಪಟ್ಟ ಸಚಿವರು ಉತ್ತರ ನೀಡುವ ಬಗ್ಗೆ

*ಶ್ರೀ ಆರ್. ವಿ. ದೇಶಪಾಂಡೆ :- (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ಈ ದಿನ ಸಾಕಷ್ಟು ಕಾರ್ಯಕಲಾಪಗಳು ಇರುವುದರಿಂದ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇವತ್ತು ಕೊನೆಯ ದಿನವಾದ್ದರಿಂದ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಲು ಪ್ರಯತ್ನ ಮಾಡುತ್ತಿದ್ದೇನೆ. ನಾವು ಈ ಸದನದಲ್ಲಿ ಮಾನ್ಯ ಸಾಂಡ್ರಾ ಅವರ ಬಗ್ಗೆ ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದು ಆ ಬಗ್ಗೆ ಅವರು ಉತ್ತರ ಕೊಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೂ ಉತ್ತರ ಕೊಡಬೇಕಾಗುತ್ತದೆ. ಇವತ್ತು ಉತ್ತರ ಬರದಿದ್ದರೆ ನಾವು ನಗೆಪಾಟಲಿಗೆ ಈಡಾಗಬೇಕಾಗುತ್ತದೆ. ಪತ್ರಿಕೆಗಳಲ್ಲಿ ಬರುತ್ತಾ ಇರುವ ವಿಚಾರಗಳನ್ನು ನೋಡಿದರೆ, ನಾವು ಇಲ್ಲಿ ವಿಚಾರ ಪ್ರಸ್ತಾಪ ಮಾಡಿದ ಮೇಲೆ ಉತ್ತರ ಬರಲಿಲ್ಲ ಎಂದರೆ ನಾವು ಅದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಅವರು ಏನೇ ಉತ್ತರ ಕೊಡಲಿ, ಆ ಅಧಿಕಾರ ಅವರಿಗೆ ಇದೆ. ಅವರು ಉತ್ತರ ಕೊಡುವ ಬಗ್ಗೆ ತಾವು ಇವತ್ತು ಒಂದು ಸಮಯವನ್ನು ನಿಗಧಿ ಮಾಡಬೇಕು. ಈ ಬಗ್ಗೆ ತಾವು ನಿರ್ಣಯ ತೆಗೆದುಕೊಂಡು ಮುಂದಿನ ಕೆಲಸಕ್ಕೆ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ವಿಚಾರ ಎತ್ತಿದ ಮೇಲೆ ಸರ್ಕಾರ ಅದರ ಬಗ್ಗೆ ಗಮನ ಕೊಡದೇ ಮುಂದಿನ ಕೆಲಸ ಮಾಡುತ್ತಾ ಹೋದರೆ ಕಷ್ಟ ಆಗುತ್ತದೆ. ಅವರು ಏನೇ ಉತ್ತರ ಕೊಡಲಿ. ಅಲ್ಲಿಯವರೆಗೆ ಬೇರೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಿ. ಈ ಪ್ರಕಾರ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ :- (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಗೆ ನಾನು ಹೇಳಿಕಳುಹಿಸುತ್ತೇನೆ.

ಅಧ್ಯಕ್ಷರು:- ಇದು ಬಹಳ ದಿವಸಗಳಿಂದ ಉಳಿದುಕೊಂಡು ಬಂದಿದೆ. ಇದಕ್ಕೆ ಇವತ್ತು ಉತ್ತರ ಆಗಬೇಕು. ಅವರಿಗೆ ಹೇಳಿ ಕಳುಹಿಸಿ ಈ ದಿವಸ ಸಂಜೆ ಒಳಗೆ ಉತ್ತರ ಕೊಡುವುದಕ್ಕೆ ಹೇಳಿ.

(ಆ) ಕಾಲೇಜು ಶಿಕ್ಷಣ ಇಲಾಖೆಯ ಭೋದಕೇತರ ಸಿಬ್ಬಂದಿಯವರಿಂದ ಉಪವಾಸ ಸತ್ಯಾಗ್ರಹ.

ಶ್ರೀ ಆರ್ ವಿ ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನಾನ್ ಟೀಚಿಂಗ್ ಸ್ಟಾಫ್ ಆಫ್ ಕೊಲಿಜಿಯೇಟ್ ಎಜ್ಯುಕೇಷನ್‌ನವರು 22.8.94ರಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಬೇಡಿಕೆಗಳಲ್ಲಿ ಯಾವುದೇ ರೀತಿಯ ಫೈನಾನ್ಸಿಯಲ್ ಬರ್ಡನ್ ಇಲ್ಲ ಆದರೂ ಸಹ ಸರ್ಕಾರದ ಕಡೆಯಿಂದ ಏನೂ ಕ್ರಮವೂ ಇವತ್ತಿನದಿವಸ ಆಗಿಲ್ಲ. ಹೀಗಾಗಿ ಇವತ್ತು ಅವರು ಸತ್ಯಾಗ್ರಹದಲ್ಲಿ ಇದ್ದಾರೆ. ಮೊನ್ನೆ ಮುಖ್ಯಮಂತ್ರಿಗಳು ನಮ್ಮದು ಭರವಸೆ ಸರ್ಕಾರ ಅಲ್ಲ ಎಂದು ಹೇಳಿದರು. ಇವತ್ತು ಹಲವಾರು ಭರವಸೆ ಕೊಟ್ಟು ನಂತರ ಹಣದ ವಿಚಾರ ಹೇಳಬಹುದು. ಆದರೆ ಇದರಲ್ಲಿ ಫೈನಾನ್ಸಿಯಲ್ ಇಂಪ್ಲಿಕೇಷನ್ಸ್ ಏನೂ ಇಲ್ಲ. ಹಾಗಾಗಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಈಗ ಡಿಗ್ರಿ ಕಾಲೇಜುಗಳಲ್ಲಿ ಏನು ನಾನ್ ಟೀಚಿಂಗ್ ಸ್ಟಾಫ್‌ನವರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಅವರು ಪೇಸ್ಕೇಲ್ ಮತ್ತು ಬೇರೊಂದರ ಬಗ್ಗೆ ಏನು ಕೇಳಿದ್ದಾರೆ, ಅದರ ಬಗ್ಗೆ ಫೈನಾನ್ಸಿಯಲ್ ಬರ್ಡನ್ ಸರ್ಕಾರದ ಮೇಲೆ ಬರುವುದಿಲ್ಲ. ಆದಕಾರಣ ಆ ಬೇಡಿಕೆಗಳ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಈ ವಿಚಾರದ ಬಗ್ಗೆ ಉನ್ನತ ಶಿಕ್ಷಣ ಮಂತ್ರಿಗಳನ್ನು ಕರೆಸಿ ಉತ್ತರವನ್ನು ಕೊಡಿಸಬೇಕೆಂದು ಹೇಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ :- (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಉನ್ನತ ಶಿಕ್ಷಣ ಮಂತ್ರಿಗಳು ಈಗ ಸದನಕ್ಕೆ ಬರುವವರಿದ್ದಾರೆ.

(ಇ) ವಿಷಯ: ಹೇಮಾವತಿ ಕಾಲುವೆಯ ಕಳಪೆ ಕಾಮಗಾರಿ ಬಗ್ಗೆ

* ಶ್ರೀ ಆರ್.ವಿ.ದೇಶಪಾಂಡೆ : - ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಚಾರ ಇದೆ ಹೇಮಾವತಿ ಕಾಲುವೆ ಬಗ್ಗೆ ನಾನು ಈಗ ಮಾನ್ಯ ವೈ.ಕೆ.ರಾಮಯ್ಯನವರ ಜೊತೆ ಮಾತನಾಡಿದೆ. ಅಲ್ಲಿ ಏನು 82.4 ಕಿಲೋಮೀಟರ್ ನಿಂದ 83 ನೇ ಕಿಲೋಮೀಟರ್ ವರೆಗೆ ಕೆಲಸ ನಡೆಯುತ್ತಿದೆ. ಆ ಕೆಲಸ ಬಹಳ ಕಳಪೆ ಮಟ್ಟದ್ದು ಇದೆ ಹಾಗೂ ಇಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಲೂಟಿ ಆಗುತ್ತಾ ಇದೆ ಎಂದು ಸರ್ಕಾರದ ಗಮನಕ್ಕೆ ಮಾಜಿ ಸಚಿವರಾದ ಎಸ್.ರೇವಣ್ಣ ಅವರು ತಂದರು. ಆಮೇಲೆ ಉಪ ಮುಖ್ಯಮಂತ್ರಿಗಳೂ ಆ ಕೆಲಸವನ್ನು ನಿಲ್ಲಿಸಿದರು. ಮತ್ತು ಆ ಜಾಗಕ್ಕೆ ಭೇಟಿ ಕೊಟ್ಟು ತಪಾಸಣೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದು